ಈ) ಪಂಚಾಯ್ತಿ ಕಟ್ಟಡಗಳೇ ಇಲ್ಲದಿರುವ ಕಡೆ ಪಂಚಾಯ್ತಿ ಕಟ್ಟಡ ಕಟ್ಟಿಸಿಕೊಡಲು ಸರ್ಕಾರವು ಯೋಚಿಸಿದೆಯೋ ಹಾಗಿದ್ದಲ್ಲಿ ಕಟ್ಟಡವನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ ಸನ್ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಸಚಿವರು.—

ಅ) ಒಟ್ಟು ೫೫.

ಆ) ೧) ೨೩ ಪಂಚಾಯಿತಿ ಕಟ್ಟಡಗಳಿವೆ.

೨) ಅವುಗಳೆಲ್ಲವೂ ಉಪಯೋಗದಲ್ಲಿರುತ್ತವೆ.

ಇ) ಉಪಯೋಗಕ್ಕೆ ಬರದೆ ಇರುವ ಕಟ್ಟಡಗಳು ಯಾವುದೂ ಇರುವುದಿಲ್ಲವಾದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ೩೦ ಪಂಚಾಯ್ತಿಗಳಿಗೆ ಪಂಚಾಯ್ತಿ ಕಟ್ಟಡಗಳನ್ನು ಕಟ್ಟಬೇಕಾಗಿದ್ದು ಈ ಪೈಕಿ ೯ ಗ್ರಾಮ ಪಂಚಾಯ್ತಿಗಳಲ್ಲಿ ಕಟ್ಟಡಗಳು ಹೊಸದಾಗಿ ನಿರ್ಮಾಣವಾಗುತ್ತಿರುತ್ತವೆ. ಉಳಿದ ೨೧ ಪಂಚಾಯ್ತಿಗಳಿಗೆ ಹೊಸೆಯುವ ಹಣವನ್ನು ಗಣನೆಗೆ ತೆಗೆದು ಕೊಂಡು ಪಂಚಾಯ್ತಿ ಕಟ್ಟಡ ಕಟ್ಟಲಂ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ.—ನನ್ನ ಕ್ಷೇತ್ರಕ್ಕೆ ಚನ್ನಪಟ್ಟಣ ತಾಲ್ಲೂಕಿನ ಕೆಲವು ಪಂಚಾಯಿತಿಗಳು ಸೇರಿವೆ. ಅಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೀರಿ ? ಅದೇ ರೀತಿ ಕನಕಪುರ ತಾಲ್ಲೂಕಿನಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೀರಿ ? ವಿರೂಪಾಕ್ಷಪುರ ಹೋಬಳಿಯ ವಿರೂಪಾಕ್ಷ ಪುರದಲ್ಲಿ ಪಂಚಾಯಿತಿ ಕಟ್ಟಡವನ್ನು ಕಟ್ಟಲಾಗುತ್ತದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಹೋಬಳಿ ವೈಸ್ ಅಂಕಿ ಅಂಶಗಳು ನನ್ನಲ್ಲಿಲ್ಲ. ಸಾತನೂರು ಹೋಬಳಿಯಲ್ಲಿ ೯ ಪಂಚಾಯಿತಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಅವುಗಳ ಹೆಸರನ್ನು ಹೇಳುತ್ತೇನೆ. ಅಲನಂದ್ ಹಳ್ಳಿ, ಮಳಿಹಳ್ಳಿ, ಹುಣಗಂದ, ಬೇಡಿಕಟ್ಟೆ, ಈ ರೀತಿ ೯ ಪಂಚಾಯಿತಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ.

ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ.—ವಿರೂಪಾಕ್ಷ ಪುರಕ್ಕೆ ಪಂಚಾಯಿತಿ ಕಟ್ಟಡವನ್ನು ಕಟ್ಟಲಾಗುತ್ತಿದೆಯೋ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಯಾವ ಹೋಬಳಿಗೆ ಸೇರಿದೆ ಎನ್ನುವ ಬಗ್ಗೆ ಮತ್ತೆ ಹೋಬಳಿ ವೈಸ್ ಅಂಕಿ ಅಂಶ ಗಳನ್ನು ಸದ್ಯಕ್ಕೆ ನನ್ನಲ್ಲಿಲ್ಲ.

ಶ್ರೀ ಕೆ.ಜಿ ಶ್ರೀನಿವಾಸಮೂರ್ತಿ.—೫೫ ಪಂಚಾಯಿತಿಗಳು ಇವೆ ಅಂತ ಹೇಳಿದ್ದೀರಿ. ಇದರಲ್ಲಿ ೨೩ ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೇವೆ ಎಂಬುದಾಗಿ ಹೇಳಿದ್ದೀರಿ. ನನ್ನ ಕ್ಷೇತ್ರದಲ್ಲಿರುವ ವಿರೂಪಾಕ್ಷ ಪುರ ಹೋಬಳಿಯಲ್ಲಿ ಎಷ್ಟು ಪಂಚಾಯಿತಿ ಕಟ್ಟಡಗಳನ್ನು ಕಟ್ಟಿದ್ದೀರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಸಾತನೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಲಾಗಿದೆ. ಪಾವನ್ ಅದಸ್ಕರಿಗೆ ವಿರೂಪಾಕ್ಷಪುರ ಹೋಬಳಿಗೆ ಸಂಬಂಧಪಟ್ಟಂತೆ ಬೇಕಾದರೆ ಪ್ರತ್ಯೇಕವಾಗಿ ವಿವರವನ್ನು ಒದಗಿಸಿಕೊಡಲಾಗುವುದು.

ತಿಪಟೂರು ಟೌನಿನ ಹೆಣ್ಣುಮಕ್ಕಳ ಪ್ರೌಢಶಾಲೆಯ ಬಗ್ಗೆ

೧೫೪. ಶ್ರೀ ಎಸ್. ಪಿ ಗಂಗಾಧರಪ್ಪ. (ತಿಪಟೂರು).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ತಿಪಟೂರು ಟೌನಿನ ಹೆಣ್ಣು ಮಕ್ಕಳ ಪ್ರೌಢಶಾಲೆ ಹಳೇ ಹೆರಿಗೆ ಆಸ್ಪತ್ರೆ ಕಟ್ಟಡದಲ್ಲಿ ನಡೆಯುತ್ತಿರುವುದು ಹಾಗೂ ಸಾಕಷ್ಟು ಸ್ಥಳಾವಕಾಶವಿಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ. ಹಾಗಿದ್ದಲ್ಲಿ ಹೆಚ್ಚು ಕೊಠಡಿಗಳನ್ನು ಕಟ್ಟಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಹಣಕಾಸಿನ ಅಭಾವದಿಂದ ಇದುವರೆಗೆ ಈ ಕಾಮಗಾರಿಗಾಗಿ ಸಹಾಯಧನ ಒದಗಿಸಲು ಸಾಧ್ಯವಾಗಿಲ್ಲ. ೧೯೮೪-೮೫ರಲ್ಲಿ ಹೆಚ್ಚಿನ ಸ್ಥಳಾವಕಾಶ ಒದಗಿಸಲು ಯತ್ನಿಸಲಾಗುವುದು.

ಶ್ರೀ ಎಸ್. ಪಿ. ಗಂಗಾಧರಪ್ಪ.—ತಿಪಟೂರು ಟೌನಿನ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ ಹಳೇ ಹೆರಿಗೆ ಆಸ್ಪತ್ರೆಯಲ್ಲಿ ನಡೆಯುತ್ತಿದ್ದು, ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂಬುದಾಗಿ ಹೇಳಿದ್ದೀರಿ. ಆದ್ದರಿಂದ ಇದಕ್ಕಾಗಿ ಪ್ರತ್ಯೇಕವಾಗಿ ಒಂದು ಶಾಲಾ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಬೇಕಾದಂತಹ ಹಣವನ್ನು ಸರ್ಕಾರ ಒದಗಿಸುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಅಲ್ಲಿ ೬೫೩ ವಿದ್ಯಾರ್ಥಿಗಳಿದ್ದಾರೆ. ೮ನೇ ತರಗತಿಯಲ್ಲಿ ೧೯೧ ಜನ ವಿದ್ಯಾರ್ಥಿಗಳು, ೯ನೇ ತರಗತಿಯಲ್ಲಿ ೧೪೭ ಜನ ವಿದ್ಯಾರ್ಥಿಗಳು, ಹಾಗೂ ೧೦ನೇ ತರಗತಿಯಲ್ಲಿ ೧೧೫ ಜನ ವಿದ್ಯಾರ್ಥಿಗಳು ಇದ್ದು ಅಲ್ಲಿ ಸ್ಥಳದ ಒತ್ತಡ ಇದೆ ಎಂಬುದಾಗಿ ನನ್ನ ಗಮನಕ್ಕೆ ಬಂದಿದೆ. ಈಗ ಅಲ್ಲಿ ೧೩ ಕೊಠಡಿಗಳು ಇದ್ದು, ಇನ್ನು ೬ ಕೊಠಡಿಗಳ ಅವಶ್ಯಕತೆ ಇದೆ. ಆದರೂ ನಮ್ಮ ಹಣಕಾಸಿನ ಪರಿಸ್ಥಿತಿಯಿಂದ ಈ ವರ್ಷ ಹಣವನ್ನು ಒದಗಿಸಲಾಗಲಿಲ್ಲ. ಮುಂದಿನ ವರ್ಷ ಇದಕ್ಕಾಗಿ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಪಿ. ಗಂಗಾಧರಪ್ಪ.—ಚುನಾವಣೆಯಲ್ಲಿ ಶೇಕಡ ೨೦ ರಷ್ಟು ಮೀಸಲಾತಿಯನ್ನು ಹೆಣ್ಣು ಮಕ್ಕಳಿಗೆ ಇಟ್ಟಿರುವಂತೆ, ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲೂ ಕೂಡ ಶೇಕಡ ೨೦ ಪರ್ಸೆಂಟ್ ಮೀಸಲಾತಿಯನ್ನು ಇಡುವಂತಹ ಧೋರಣೆ ಸರ್ಕಾರಕ್ಕೆ ಇದೆಯೇ ?

ಶ್ರೀ ಬಿ. ರಾಚಯ್ಯ.—ಮುಂದಿನ ವರ್ಷ ಹೆಣ್ಣು ಮಕ್ಕಳ ಶಾಲಾ ಕಟ್ಟಡಗಳಿಗೆ ಹಾಗೂ ಹೆಣ್ಣು ಮಕ್ಕಳ ಹಾಸ್ಟಲ್ ಕಟ್ಟಡಗಳಿಗೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ನಂ. (೧೯) ೮೪

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ —ಈ ಪ್ರಶ್ನೆಯನ್ನು ತಡೆಹಿಡಿಯಬೇಕು.

ಅಧ್ಯಕ್ಷರು.—ಉತ್ತರ ಬಂದಿಲ್ಲ ಮುಂದಕ್ಕೆ ಹಾಕಿ ಎಂಬುದಾಗಿ ಹೇಳುತ್ತಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇಂತಹ ಮುಖ್ಯವಾದ ವಿಚಾರದಲ್ಲಿ ೪೦ ಲಕ್ಷ ಜನಗಳ ಬಗ್ಗೆ ಸಂಬಂಧಪಟ್ಟಂತಹ ಪ್ರಶ್ನೆಗೆ ಉತ್ತರ ಬಂದಿಲ್ಲ. ಅಂತ ಹೇಳಿದರೆ ಹೇಗೆ ?

ಅಧ್ಯಕ್ಷರು.—ಮುಂದೆ ಒಂದು ಗಮನ ಸೆಳೆಯುವ ಸೂಚನೆ ಕೂಡ ಇದೆ. ಅದರಲ್ಲಿ ಏನಾದರೂ ಮಾಹಿತಿ ಸಿಕ್ಕುತ್ತದೆಯೇ ನೋಡೋಣ. ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ತನ್ನದೇ ಆದ ಸಿಬ್ಬಂದಿಯನ್ನು ನೇಮಕಾತಿ ಮಾಡುವ ಬಗ್ಗೆ

೯೯ ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ)—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ತನ್ನದೇ ಆದ ಸಿಬ್ಬಂದಿ ಇಲ್ಲದೇ ಇರುವುದರಿಂದ ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಸಾಧನೆಯಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಸ್ವಲ್ಪ ವಂಟ್ಟಿಗೆ ಹೌದು. ಜನಾರೋಗ್ಯ ಇಂಜನಿಯರಿಂಗ್ ಇಲಾಖೆಯು ತನಗೆ ಬೇಕಾದ ಸಿಬ್ಬಂದಿಯನ್ನು ಲೋಕೋಪಯೋಗಿ ಇಲಾಖೆಯಿಂದ ಎರವಲು ಪಡೆಯುತ್ತದೆ. ಅಭಿವೃದ್ಧಿ